ಆರ್‌ಆರ್‌ಸಿ ಕನ್ನಡ ಧ್ಯಾನಕೂಟ

ಪ್ರತಿ ತಿಂಗಳೂ ಮೂರನೇ ಶನಿವಾರದ ಹಿಂದಿನ ಶುಕ್ರವಾರ ಪ್ರಾರಂಭವಾಗಿ ಭಾನುವಾರ ಮುಕ್ತಾಯವಾಗುತ್ತದೆ. ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಪ್ರಾರಂಭವಾಗಿ ಭಾನುವಾರ ಸಂಜೆ 5.00 ಗಂಟೆಗೆ ಕನ್ನಡ ಧ್ಯಾನಕೂಟ ಮ ಕ್ತಾಯವಾಗುತ್ತದೆ.

ಅಭಿಷೇಕಿಸಲ್ಪಟ್ಟ ಪ್ರಬೋಧನೆಗಳು ವರದಾನಿತ ಕೌನ್ಸೆಲಿಂಗ್, ರೋಗಸೌಖ್ಯ ಪ್ರಾರ್ಥನೆ, ಪರಮ ಪ್ರಸಾದ ಆರಾಧನೆ, ಬಲಿಪೂಜೆ ಸೇವೆಗಳಿಂದ ಆರ್.ಆರ್.ಸಿ. ತಂಡದ ಸದಸ್ಯರು ಈ ಧ್ಯಾನಕೂಟವನ್ನು ನಡೆಸಿಕೊಡುತ್ತಾರೆ.

ಧ್ಯಾನಕೂಟದ ದಿನಗಳು

ಫೆಬ್ರವರಿ 16 - 18	ಮಾರ್ಚ್ 16 -18
ಏಪ್ರಿಲ್ 20 - 22	ಮೇ 18 - 20

ರಾತ್ರಿ ಜಾಗರಣೆ ಪ್ರಾರ್ಥನೆ

''ರಾತ್ರಿಯ ಒಂದೊಂದು ಜಾವದಲ್ಲೂ ಎದ್ದು ಗೋಳಾಡಿರಿ. ನಿಮ್ಮ ಹೃದಯ ಕರಗಿ, ನೀರಾಗಿ ಸ್ವಾಮಿಯ ಮುಂದೆ ಹರಿಯಲಿ...'' - ಪ್ರಲಾಪಗಳು 2:19

ಪ್ರತಿ ತಿಂಗಳ ಮೊದಲನೇ ಶನಿವಾರ ರಾತ್ರಿ 9.30 ರಿಂದ 5.00 ಸೇವೆಗಳು; ಪ್ರಭೋದನೆ, ಸ್ತುತಿ ಸ್ತೋತ್ರ, ಬಿಡುಗಡೆಯ ಪ್ರಾರ್ಥನೆ, ಪರಮಪ್ರಸಾದ ಆರಾಧನೆ, ಹಸ್ತನಿಕ್ಷೇಪ ಪ್ರಾರ್ಥನೆ, ದಿವ್ಯಬಲಿಪೂಜೆ.

ಮಧ್ಯಸ್ತಿಕೆ ಪ್ರಾರ್ಥನೆ ಕೂಟ

''ಮೋಶೆ ತನ್ನ ಕೈಗಳನ್ನು ಮೇಲಕ್ಕೆ ಎತ್ತಿರುವಾಗಲೆಲ್ಲಾ ಇಸ್ರಯೇಲರು ಜಯಶೀಲರಾಗುತ್ತಿದ್ದರು....'' - ವಿಮೋಚನಕಾಂಡ 17:11

ಎಲ್ಲಾ ಸೋಮವಾರದಿಂದ ಗುರುವಾರದವರೆಗೆ ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ ಪ್ರಪಂಚದ ಎಲ್ಲಾ ಉದ್ದೇಶಗಳಿಗಾಗಿ ಕನ್ನಡ ಮಧ್ಯಸ್ತಿಕೆ ತಂಡದವರು ಮಧ್ಯಸ್ತಿಕೆ ಪ್ರಾರ್ಥನೆ ನಡೆಸುತ್ತಿದ್ದಾರೆ. ನಿಮ್ಮ ಪ್ರಾರ್ಥನಾ ಕೋರಿಕೆ-ಬೇಡಿಕೆಗಳನ್ನು ಅಂಚೆ ಮೂಲಕ, ಇ-ಮೇಲ್ ಮೂಲಕ, ದೂರವಾಣಿ ಮೂಲಕ ಮತ್ತು ಆರ್‌ಆರ್‌ಸಿ ವೆಬ್‌ಸೈಟ್ ಮೂಲಕ ನೀವು ನಮಗೆ ಕಳುಹಿಸಿಕೊಡಬಹುದು. ನಾವು ನಿಮ್ಮ ಉದ್ದೇಶಗಳಿಗಾಗಿ ಪ್ರಾರ್ಥಿಸುತ್ತೇವೆ.

ಆರ್‌ಆರ್‌ಸಿ ಧ್ಯಾನಕೇಂದ್ರದ ಎಲ್ಲಾ ಕನ್ನಡ ಸೇವೆಗಳಲ್ಲಿ ಭಾಗವಹಿಸಿ ದೇವರ ಹೇರಳವಾದ ಆಶೀರ್ವಾದವನ್ನು ಹೊಂದಿಕೊಳ್ಳಲು ಎಲ್ಲರಿಗೂ ಸ್ವಾಗತ.

''ರಕ್ತಧಾರೆ ಇಲ್ಲದೆ ಪಾಪ ಪರಿಹಾರವಿಲ್ಲ''

ವೈಲಟ್ ಮೇರಿ
ಕನ್ನಡ ವಿಭಾಗ, ಆರ್‌ಆರ್‌ಸಿ

ಆದಿ ಮಾನವ ಆದಾಮನು ಪಾಪ ಮಾಡಿ ಅಂದರೆ ದೇವರ ವಾಕ್ಯ ಮೀರಿ ಜೀವಿಸಿದಾಗ ದೈವದತ್ತ ಮಹಿಮೆ ನಿತ್ಯಜೀವವಾದ ಪವಿತ್ರಾತ್ಮರನ್ನು ಕಳೆದುಕೊಂಡನು. ಒಬ್ಬ ಮನುಷ್ಯನಿಂದಲೇ ಪಾಪ, ಪಾಪದಿಂದ ಮರಣ, ಈ ಲೋಕವನ್ನು ಪ್ರವೇಶಿಸಿದವು. ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಎಲ್ಲರಿಗೂ ಪ್ರಾಪ್ತಿಯಾಯಿತು. ಆದಿಕಾಂಡ 3:21ರಂತೆ ಪಾಪ ಮಾಡಿ ಅಶುದ್ಧನಾದ ಆದಾಮ ಮತ್ತೆ ಪರಿಶುದ್ಧನಾಗಿ ದೇವರ ಪ್ರಸನ್ನತೆಗೆ ಬರಲು ನಿಷ್ಕಳಂಕ ಕುರಿಮರಿ ತನ್ನ ಪ್ರಾಣವನ್ನು ತೆತ್ತು, ರಕ್ತವನ್ನು ಚೆಲ್ಲಿ, ಅದರ ಚರ್ಮದ ಅಂಗಿಗಳನ್ನು ಆದಾಮನಿಗೂ ಆತನ ಹೆಂಡಿಗೂ ತೊಡಿಸಲಾಯಿತು. ಇಸ್ರಯೇಲರು ಪಾಪ ದೋಷ ಪರಿಹಾರಕ್ಕಾಗಿ ಕುರಿ-ಹೋತ-ಟಗರುಗಳನ್ನು ದಹನ ಬಲಿಯಾಗಿ ಸಮರ್ಪಿಸುತ್ತಿದ್ದರು. ಆದರೆ ಇಬ್ರಿಯ 10:4ರಂತೆ ಹೋತ, ಹೋರಿ ಕರುಗಳ ರಕ್ತದಿಂದ ಪಾಪ ನಿವಾರಣೆ ಅಸಾಧ್ಯವಾಗಿದ್ದ ಕಾರಣ ಇಡೀ ಲೋಕದ ಪಾಪ ಪರಿಹಾರಕ್ಕಾಗಿ ದೇವರೇ ಮನುಷ್ಯಾವತಾರ ತಾಳಿ ಯೇಸುಕ್ರಿಸ್ತನಾಗಿ ಜನಿಸಿ ಬಂದರು.

ಯೋಹಾನ್ನ 1:29ರಲ್ಲಿ ಯೋಹಾನ್ನನು ಯೇಸುಕ್ರಿಸ್ತರನ್ನು ಲೋಕಕ್ಕೆ ಪ್ರಕಟಿಸಿದ್ದು ಹೀಗೆ ''ಇಗೋ ನೋಡಿ, ಬಲಿಯರ್ಪಣೆಗಾಗಿ ದೇವರು ನೇಮಿಸಿರುವ ಕುರಿಮರಿ. ಲೋಕದ ಪಾಪಗಳನ್ನು ಪರಿಹರಿಸುವವರು ಇವರೇ''. ಇಂದು ಯೇಸು ಕ್ರಿಸ್ತರು ಶಿಲುಬೆ ಮರಣದ ಮೂಲಕ ಸುರಿಸಿದ ಪರಿಶುದ್ಧ ರಕ್ತ ಸಕಲ ಮಾನವರ ಪಾಪ-ಶಾಪಗಳನ್ನು ಶುದ್ಧೀಕರಿಸಿ ಬಿಡುಗಡೆ ನೀಡುವ ರಕ್ತವಾಗಿದೆ.

ಎಫೆಸ 1:7 ''ಯೇಸುಕ್ರಿಸ್ತರು ಸುರಿಸಿದ ರಕ್ತದಿಮದ ನಮಗೆ ಪಾಪ ಕ್ಷಮೆ ವಿಮೋಚನೆಯೂ ಲಭಿಸಿತು...'' ಪಾಪದ ಸಂಬಳ ಮರಣ ಆದರೆ ಪ್ರಭು ಕ್ರಿಸ್ತರಲ್ಲಿ ನಮಗೆ ದೊರಕುವ ವರದಾನ ಪಾಪಕ್ಷಮೆ ಮತ್ತು ನಿತ್ಯಜೀವ.

ಪ್ರಾರ್ಥಿಸೋಣ : ಸ್ವರ್ಗದಲ್ಲಿರುವ ಪಿತ ದೇವರೇ, ಈ ಪತ್ರಿಕೆಯನ್ನು ಓದುವ ಪ್ರತಿಯೊಬ್ಬ ಸಹೋದರ-ಸಹೋದರಿಯರನ್ನು ಅವರ ಕುಟುಂಬಗಳನ್ನೂ ಯೇಸುವಿನ ಪರಿಶುದ್ಧ ರಕ್ತದಿಂದ ತೊಳೆದು ಶುದ್ಧೀಕರಿಸಿ ಸಕಲ ಪಾಪ-ಶಾಪಗಳು, ರೋಗ-ರುಜಿನಗಳು, ಮಾಟ-ಮಂತ್ರಗಳು, ಕಷ್ಟ-ಬಾಧೆಗಳಿಂದ ಬಿಡುಗಡೆ ನೀಡಿರಿ. ಸತ್ಯ ಸ್ವರೂಪರಾದ ದೇವರನ್ನು ಆರಾಧಿಸುವಂತೆ, ಸಕಲ ಜಡ ಕರ್ಮಗಳಿಂದ ಅವರನ್ನು ಬಿಡುಗಡೆ ಮಾಡಿ ಅಂತರಂಗಗಳನ್ನು ಪರಿಶುದ್ಧಗೊಳಿಸಿರಿ. ಯೇಸುವಿನ ರಕ್ತದ ಬಲದಲ್ಲಿ ಅವರ ಶರೀರದ ಎಲ್ಲಾ ರೋಗಗಳು ಗುಣವಾಗಲಿ. ಯೇಸುವಿನ ರಕ್ತದಿಂದ ಎಲ್ಲಾ ಅಂಧಕಾರ ಶಕ್ತಿಗಳು ದುಷ್ಟ ದುರಾತ್ಮನಿಂದ ಬಿಡುಗಡೆಯನ್ನು ಹೊಂದಿಕೊಳ್ಳಲಿ. ನಿತ್ಯಜೀವದ ಮುದ್ರೆಯಾದ ಪವಿತ್ರಾತ್ಮರಿಂದ ಪ್ರತಿಯೊಬ್ಬರೂ ಅಭಿಷೇಕಿಸಲ್ಪಡಲಿ. ಸತ್ಯವಂತನೂ, ಪರಿಶುದ್ಧನೂ, ವಿಶ್ವಾಸ ಪಾತ್ರನೂ ಆದ ಪ್ರಭು ಯೇಸುಕ್ರಿಸ್ತರ ನಾಮದಲ್ಲಿ ಪ್ರಾರ್ಥಿಸುತ್ತೇನೆ. ಆಮೆನ್.

Printed and Published by Fr. Joseph Mundolickal CST, on behalf of Renewal Retreat Centre, Christ School Road, Bangalore - 29, Tel. 9739830422
Printed at Matha Prints, Bangalore - 560 029 Tel. 9886809060 and published at Bangalore. Editor: Fr. Prince Chakkalayil CST

ರಿನ್ಯೂವಲ್ ವಾಯ್ಸ್

VOL. 2, ISSUE 2,
FEBRUARY 2018

Renewal Retreat Centre (CST Fathers)
Christ School Road, Bangalore 560029
Tel. 08041106241, 08026683988, 9845972277
Email: renwalvoicerrc@gmail.com, Website: www.rrcbangalore.in

ಆಯ್ಕೆ

ಫಾದರ್ ಪ್ರಿನ್ಸ್ ಥಾಮಸ್, ಸಿಎಸ್‌ಟಿ
ಮುಖ್ಯ ಸಂಪಾದಕರು

ಆಸ್ಕರ್ ಪ್ರಶಸ್ತಿ ಘೋಷಿಸುವುದಕ್ಕೆ ಹಿಂದಿನ ದಿನ ಮತ್ತೊಂದು ಪ್ರಶಸ್ತಿಯನ್ನು ಘೋಷಿಸಲಾಯಿತು. ಚಲನಚಿತ್ರ ಉದ್ಯಮದಲ್ಲಿ ಕಳಪೆ ನಟನೆಯನ್ನು ಗುರುತಿಸಿ ಅದನ್ನು ಅಣಕಿಸುವ ರೀತಿಯಲ್ಲಿ ಕೊಡಲಾಗುವ ಒಂದು ಪ್ರಶಸ್ತಿ. ''ಸುವರ್ಣ ರಾಸ್ಪ್‌ಬೆರ್ರಿ ಪ್ರಶಸ್ತಿ'' ಎಂಬುದಾಗಿದೆ.

2010ನೇ ಇಸವಿಯಲ್ಲಿ ''ಆಲ್ ಅಬೌಟ್ ಸ್ಟೀವ್'' ಎಂಬ ಚಲನಚಿತ್ರದಲ್ಲಿ ತನ್ನ ಕಳಪೆ ನಟನೆಗಾಗಿ ಸಾಂಡ್ರಾ ಬುಲ್ಲೋಕ್ ಎಂಬುವರಿಗೆ ಈ ಸುವರ್ಣ ರಾಸ್ಪ್‌ಬೆರ್ರಿ ಪ್ರಶಸ್ತಿ ನೀಡಲಾಯಿತು. ಮಾರನೆಯ ದಿನವೇ ಸಾಂಡ್ರಾ ಬುಲ್ಲೋಕಳಿಗೆ ''ದಿ ಬ್ಲೈಂಡ್ ಸೈಡ್'' ಎಂಬ ಚಲನಚಿತ್ರದಲ್ಲಿ ಅತ್ಯುತ್ತಮವಾದ ನಟನೆಗಾಗಿ ''ಆಸ್ಕರ್ ಪ್ರಶಸ್ತಿ'' ಲಭಿಸಿತು. ಈ ಎರಡೂ ಪ್ರಶಸ್ತಿಗಳನ್ನು ಸ್ವೀಕರಿಸಿದ ಆಕೆ ಅವೆರಡನ್ನೂ ತನ್ನ ಶೋಕೇಸ್‌ನಲ್ಲಿ ಒಟ್ಟಿಗೆ ಇರಿಸಿ ಹೀಗೆಂದು ನುಡಿದಳು ''ನಾವು ಉತ್ತಮವಾದುದನ್ನು ನೀಡಿದಾಗ ಉತ್ತಮವಾದುದನ್ನು ಹಿಂದಕ್ಕೆ ಪಡೆಯುತ್ತೇವೆ ಮತ್ತು ಉತ್ತಮತೆಯಿಂದ ಸಡಿಲವಾದಾಗ ನಾವು ಕೆಟ್ಟ ಪ್ರದರ್ಶನವನ್ನು ಕೊಡುವುದರಲ್ಲಿಯೇ ಮತ್ತು ಕೆಟ್ಟದ್ದರಲ್ಲಿಯೇ ಮುಕ್ತಾಯವಾಗುತ್ತದೆ.

ನಾವೀಗ ಪವಿತ್ರ ತಪಸ್ಸು ಕಾಲವನ್ನು ಪ್ರವೇಶಿಸಲಿದ್ದೇವೆ. ನಮ್ಮ ಜೀವನವನ್ನು ಮರು ಪಶೀಲನೆ ಮಾಡಲು ಇದೊಂದು ಸದವಕಾಶವಾಗಿದೆ. ನಾವು ಮಾನಸಾಂತರ ಹೊಂದಿ ದೇವರಿಗೆ ಅಭಿಮುಖರಾಗಿ ಪರಿಶುದ್ಧ ಜೀವನ ನಡೆಸಿದರೆ ಸ್ವರ್ಗ ಸಾಮ್ರಾಜ್ಯ ಪಡೆದುಕೊಳ್ಳುತ್ತೇವೆ. ಮತ್ತು ನಾವು ಪ್ರಾಪಂಚಿಕ ಸುಖಭೋಗಗಳಲ್ಲೇ ಮೈಮರೆತರೆ ನಮ್ಮ ಪಾಪ ಜೀವನದ ನಿಮಿತ್ತ ನಾಶವಾಗುತ್ತೇವೆ. ''ಇಗೋ ನೋಡಿ, ನಾನು ಶುಭವನ್ನೂ-ಅಶುಭವನ್ನೂ, ಜೀವವನ್ನು - ಸಾವನ್ನು ಈಗ ನಿಮ್ಮ ಮುಂದೆ ಇಟ್ಟಿದ್ದೇನೆ'' ಎಂದು ದೇವರು ಹೇಳುತ್ತಾ ನಮ್ಮ ಜೀವನದ ಆಯ್ಕೆ ಸ್ವಾತಂತ್ರ್ಯವನ್ನು ನಮಗೆ ನೀಡುತ್ತಾ ಮುಂದೆ ಯಾವುದನ್ನು ಆರಿಸಿಕೊಳ್ಳಬೇಕೆಂದು ಮುನ್ನಡೆಸುತ್ತಾರೆ. ''ನೀವು ನಮ್ಮ ದೇವರಾದ ಸರ್ವೇಶ್ವರನನ್ನು ಪ್ರೀತಿಸಿ, ಅವರು ಹೇಳಿದ ಮಾರ್ಗದಲ್ಲಿ ನಡೆದು, ಅವರ ಆಜ್ಞಾ ವಿಧಿ ನಿರ್ಣಯಗಳನ್ನು ಅನುಸರಿಸಿದರೆ ನೀವು ಬದುಕಿಬಾಳುವಿರಿ, ಅಭಿವೃದ್ಧಿಯಾಗುವಿರಿ ಮತ್ತು ನೀವು ಸ್ವಾಧೀನ ಮಾಡಿಕೊಳ್ಳಲು ಹೋಗುವ ನಾಡಿನಲ್ಲಿ ನಿಮ್ಮ ದೇವರಾದ ಸರ್ವೇಶ್ವರ ನಿಮ್ಮನ್ನು ಆಶೀರ್ವದಿಸುವರು'' ಧರ್ಮೋಪದೇಶಕಾಂಡ 30:15-20

ಕೀರ್ತನೆ 19:13ರ ವಚನ ಕಾಪಾಡೆನ್ನನು, ಬೇಕು ಬೇಕೆಂದು ಪಾಪ ಮಾಡದಂತೆ, ಕಾದಿಡು ಅಂಥ ಪಾಪಕೆ ನಾ ದಾಸನಾಗದಂತೆ, ನಿರ್ದೋಷಿಯಾಗುವೆನು. ಆ ದ್ರೋಹಕ್ಕೊಳಗಾಗದಂತೆ'' ಪಾಪ ರಹಿತವಾದ ಜೀವನವನ್ನು ನಡೆಸೋಣ.

ದೇವರ ಕರುಣೆಯ ಆಶ್ರಯ

ಫಾದರ್ ಜೋಸೆಫ್ ಮುಂಡೋಲಿಕ್ಕಲ್, ಸಿ.ಎಸ್.ಟಿ
ನಿರ್ದೇಶಕರು, ಆರ್‌ಆರ್‌ಸಿ ಧ್ಯಾನಮಂದಿರ

ಆತ್ಮೀಯರೇ, ನಾವೀಗ ತಪಸ್ಸು ಕಾಲದಲ್ಲಿ ಉಪವಾಸ ಮತ್ತು ಪ್ರಾರ್ಥನೆ ಮೂಲಕ ಪಶ್ಚಾತ್ತಾಪ, ಮನ ಪರಿವರ್ತನೆಯ ದಿನಗಳನ್ನು ಸಮೀಪಿಸಿದ್ದೇವೆ. ಪ್ರಭು ಯೇಸುಕ್ರಿಸ್ತರು ಪಿಶಾಚಿಯಿಂದ ಪರಿಶೋಧಿತರಾಗಲು ಬೆಂಗಾಡಿಗೆ ಕರೆದೊಯ್ಯಲ್ಪಟ್ಟು 40 ದಿನಗಳು ಹಗಲಿರುಳೂ ಉಪವಾಸವಿದ್ದು ಶೋಧನೆಯನ್ನು ಜಯಿಸಿದ್ದು ನಮ್ಮ ಸ್ಮರಣೆಗೆ ತರುವ ಕಾಲ ತಪಸ್ಸು ಕಾಲವಾಗಿದೆ.

ಬೆಂಗಾಡಿನ ಆ ದಿನಗಳು ಯೇಸುವಿನ ಸೇವಾವೃತ್ತಿಗೆ ಪೂರ್ವಸಿದ್ಧತೆಯ ದಿನಗಳಾಗಿದ್ದವು. ಯೋಹಾನ್ನನಿಂದ ಜೋರ್ಡಾನ್ ನದಿಯಲ್ಲಿ ಸ್ನಾನದೀಕ್ಷೆ ಪಡೆದುಕೊಂಡು ಮತ್ತು ''ಈತ ದೇವರ ಪುತ್ರ'' ಎಂದು ಸ್ವರ್ಗದ ವಾಣಿ ಘೋಷಿಸಲ್ಪಟ್ಟನಂತರ, ಪವಿತ್ರಾತ್ಮರಿಂದ ಪ್ರೇರಿತರಾಗಿ ಯೇಸುಕ್ರಿಸ್ತರು ಉಪವಾಸ ಮತ್ತು ಪ್ರಾರ್ಥನೆಯಲ್ಲಿ ನಿರತರಾಗಲು ಬೆಂಗಾಡಿಗೆ ಕರೆದೊಯ್ಯಲ್ಪಟ್ಟರು. ಪವಿತ್ರಾತ್ಮರ ಭರಿತರಾಗಿ ಪ್ರಾರ್ಥನೆಯಲ್ಲಿ ಶಕ್ತಿಯುತರಾಗಿದ್ದ ಈ ಸಮಯದಲ್ಲಿ ಸೈತಾನನು ಪ್ರಭುಯೇಸುಕ್ರಿಸ್ತರನ್ನು ವಿಶ್ವಾಸ, ಸಂಪತ್ತು ಮತ್ತು ಅಧಿಕಾರಕ್ಕೆ ಸಂಬಂಧಿಸಿದಂತೆ ಪ್ರಲೋಭನೆಗೆ ಗುರಿ ಪಡಿಸಿದನು. ಆದರೆ ಪ್ರಭು ಯೇಸುಕ್ರಿಸ್ತರು ತನ್ನ ಜೀವಿತದ ಕುರಿತು ದೇವರ ಚಿತ್ತ ಏನೆಂಬುದನ್ನು ಅರಿತಿದ್ದ ಕಾರಣ ದೇವರ ವಾಕ್ಯದ ಶಕ್ತಿಯಿಂದ ಸೈತಾನನ ಎಲ್ಲಾ ಪ್ರಲೋಭನೆಗಳನ್ನು ಜಯಿಸಿದರು. ಈ ಲೋಕದಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ತನ್ನನ್ನೇ ತಾನು ತಗ್ಗಿಸಿಕೊಂಡು, ಯೆಹೂದ್ಯರ ಕೈಗಳಿಗೆ ತನ್ನನ್ನೇ ಒಪ್ಪಿಸಿಕೊಟ್ಟು, ಶಿಲುಬೆಯಾತನೆ ಮೂಲಕ ಮರಣವನ್ನಪ್ಪಿ, ಮರಣ ಗೆದ್ದು ಮೃತ್ಯುಂಜಯನಾಗಿ ದೇವರ ಚಿತ್ತವನ್ನು ಪೂರ್ತಿಯಾಗಿ ನೆರವೇರಿಸಿದರು

ಯೇಸುವಿನೊಟ್ಟಿಗೆ ಸೇರಿ ನಾವೂ ಸಹ ತಪಸ್ಸು ಕಾಲದಲ್ಲಿ ಪ್ರಾರ್ಥನೆ ಮತ್ತು ಉಪವಾಸ ವ್ರತ ಕೈಗೊಳ್ಳುತ್ತೇವೆ. ಈ ಕಾಲ ನಮ್ಮ ಜೀವನವನ್ನು ನೂತನಗೊಳಿಸುವ ಸಮಯ. ಈ ಸಮಯವನ್ನು ನಮ್ಮ ಶಾರೀರಿಕ ಮತ್ತು ಮಾನಸಿಕ ಶುದ್ಧತೆಗೆ ಮಾತ್ರ ಸೀಮಿತವಾಗಿಡದೆ ಬದಲಿಗೆ ನಮ್ಮ ಆಧ್ಯಾತ್ಮಿಕ ಶುದ್ಧತೆ ಮತ್ತು ಹೊಸ ಸೃಷ್ಟಿಗಳಾಗಲು ಉಪಯೋಗಿಸೋಣ. ಯೋವೇಲ ಪ್ರವಾದಿ 2:13ರಂತೆ ನಿಮ್ಮ ಉಡುಪಗಳನ್ನಲ್ಲ, ಬದಲಿಗೆ ನಿಮ್ಮ ಹೃದಯವನ್ನು ಸೀಳಿರಿ' ಪಾಪಿಗಳಿಗಾಗಿ ಈ ತಪಸ್ಸುಕಾಲದಲ್ಲಿ ದೇವರು ತೋರುವ ಅಪಾರ ಕರುಣೆಯನ್ನು ಆಶ್ರಯಿಸಿಕೊಂಡು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಿಸಿ ಮನಪರಿವರ್ತನೆ ಹೊಂದೋಣ.

ಪ್ರಾರ್ಥನೆ, ಉಪವಾಸ, ಪ್ರಾಯಶ್ಚಿತ್ತ ಮತ್ತು ಸತ್ಕಾರ್ಯಗಳ ಮೂಲಕ ದೇವರ ಕರುಣೆಯನ್ನು ಸವಿಯಲು ಸಿದ್ಧರಾಗೋಣ. ದೇವರ ಚಿತ್ತಕ್ಕನುಗುಣವಾಗಿ ಜೀವಿಸಿ ಶಾಂತಿ-ಸಮಾಧಾನ, ಪರಸ್ಪರ ಸಾಮರಸ್ಯದಲ್ಲಿ ಮುನ್ನಡೆಯೋಣ.

ರಾತ್ರಿ ಜಾಗರಣೆ ಪ್ರಾರ್ಥನೆಯಲ್ಲಿ ದೇವರ ಅನುಗ್ರಹಗಳು

ಲೂಕ 1:37 ''ದೇವರಿಗೆ ಅಸಾಧ್ಯವಾದುದು ಯಾವುದೂ ಇಲ್ಲ''

ಮಕ್ಕಳ ಸೌಭಾಗ್ಯ

ರೆಜಿನಾ, ಬೇಗೂರು

ನನ್ನ ಮಗಳಿಗೆ ಮದುವೆಯಾಗಿ ನಾಲ್ಕು ವರ್ಷವಾದರೂ ಮಕ್ಕಳಾಗಲಿಲ್ಲ. ಇದರಿಂದ ಅವಳ ಕುಟುಂಬದಲ್ಲಿ ಅಸಮಾಧಾನ ತುಂಬಿತ್ತು. ಗಂಡ ಆಕೆಗೆ ವಿವಾಹ ವಿಚ್ಛೇದನ ಕೊಡಲು ಕೋರ್ಟ್ ಮೆಟ್ಟಲನ್ನೇರಿದ್ದರು. ಇದರಿಂದ ಬಹಳ ಮನ ನೊಂದುಕೊಂಡು ನಮ್ಮ ಕುಟುಂಬ ಅವಮಾನಕ್ಕೆ ಒಳಗಾಗಿತ್ತು. ನನ್ನ ಮಗಳಿಗೂ ತಂದೆಗೂ ಜಗಳ, ಭಿನ್ನಾಭಿಪ್ರಾಯ, ದ್ವೇಷ ತುಂಬಿದ್ದು ಒಬ್ಬರನ್ನೊಬ್ಬರು ಮಾತನಾಡಿಸುತ್ತಿರಲಿಲ್ಲ. ಈ ಸಮಯದಲ್ಲಿ ನಾನು ಆರ್‌ಆರ್‌ಸಿ ಧ್ಯಾನ ಕೇಂದ್ರದ ರಾತ್ರಿ ಜಾಗರಣೆ ಪ್ರಾರ್ಥನೆಯಲ್ಲಿ ಭಾಗವಹಿಸಿ ನನ್ನ ಮಗಳಿಗೆ ಮಕ್ಕಳ ಭಾಗ್ಯಕ್ಕಾಗಿ ಕಣ್ಣೀರಿನಿಂದ ಪ್ರಾರ್ಥಿಸಿದೆ. ಅದ್ಭುತಕರವಾದ ರೀತಿಯಲ್ಲಿ ದೇವರು ನನ್ನ ಪ್ರಾರ್ಥನೆಗೆ ಸದುತ್ತರವಾಗಿ ನನ್ನ ಮಗಳು ಗರ್ಭ ಧರಿಸಿದಳು. ಸ್ಕ್ಯಾನಿಂಗ್ ಮಾಡಿದಾಗ ಗರ್ಭದಲ್ಲಿ 2 ಮಕ್ಕಳಿದ್ದಾರೆಂದು ವೈದ್ಯರು ತಿಳಿಸಿದಾಗ ನಮ್ಮ ಕುಟುಂಬದಲ್ಲಿ ಅಪಾರವಾದ ಸಂತೋಷವಾಯಿತು. ನನ್ನ ಮಗಳನ್ನು 2 ಮಕ್ಕಳ ತಾಯಿಯಾಗಿಸಿ 'ಬಂಜೆ' ಎಂಬ ಅವಮಾನದಿಂದ ಬಿಡುಗಡೆ ಮಾಡಿ ಆಶೀರ್ವದಿಸಿದ ಪ್ರಭು ಯೇಸುವಿಗೆ ಸ್ತುತಿ ಸ್ತೋತ್ರ ವಂದನೆಗಳನ್ನು ಹೃದಯಾಂತರಾಳದಿಂದ ಸಲ್ಲಿಸುತ್ತೇನೆ.

2 ಕೊರಿಂಥ 3:17 ''ದೇವರಾತ್ಮ ಎಲ್ಲಿದ್ದಾರೋ ಅಲ್ಲಿ ಬಿಡುಗಡೆ ಉಂಟು.''

ಅಲರ್ಜಿಯಿಂದ ಬಿಡುಗಡೆ

ಮಾರ್ಟಿನ್, ಜಾಲಹಳ್ಳಿ, ಬೆಂಗಳೂರು

ನನಗೆ ಸುಮಾರು ತಿಂಗಳಿಂದ ಡಸ್ಟ್ ಅಲರ್ಜಿ ಉಂಟಾಗಿ ಶರೀರವೆಲ್ಲಾ ನವೆ ನೋವಿನಿಂದ ನರಳುತ್ತಿದ್ದೆ. ಎಷ್ಟೋ ಔಷಧಿ ತೆಗೆದುಕೊಂಡರೂ ಏನೂ ಪ್ರಯೋಜನವಾಗಲಿಲ್ಲ. ಜನವರಿ ತಿಂಗಳ ರಾತ್ರಿ ಜಾಗರಣೆ ಪ್ರಾರ್ಥನೆಯಲ್ಲಿ ಭಾಗವಹಿಸಿ ಸ್ತುತಿ – ಆರಾಧನೆ ನಂತರ ನನ್ನ ಶರೀರದ ಎಲ್ಲಾ ನೋವುಗಳು, ನವೆ, ಉರಿತ, ಅಲರ್ಜಿ ಸಂಪೂರ್ಣವಾಗಿ ಗುಣವಾಯಿತು. ಸೌಖ್ಯದಾಯಕನಾದ ಯೇಸು ಪ್ರಭುವಿಗೆ ಕೃತಜ್ಞತಾ ಸ್ತುತಿ ಸ್ತೋತ್ರಗಳನ್ನು ಸಲ್ಲಿಸುತ್ತೇನೆ.

ಕೀರ್ತನೆ 127:3 ''ಪ್ರಭುವಿನಿಂದ ಬಂದ ಸೊತ್ತು ಪುತ್ರ ಸಂತಾನ ಕರುಳ ಕುಡಿಯು ಆತನು ನೀಡುವ ಬಹುಮಾನ''

ಮಕ್ಕಳ ಅನುಗ್ರಹ

ಜಗದೀಶ, ಜೆ.ಪಿ. ನಗರ, ಬೆಂಗಳೂರು

ಡಿನನ್ನ ಸಹೋದ್ಯೋಗಿ ಒಬ್ಬರಿಗೆ ಮದುವೆಯಾಗಿ 8 ವರ್ಷಗಳಾದರೂ ಮಕ್ಕಳಿಲ್ಲದೆ ಅವರು ಬಹಳ ದುಃಖತಪ್ತರಾಗಿದ್ದರು. ನಾನು ಆರ್‌ಆರ್‌ಸಿ ಧ್ಯಾನಕೇಂದ್ರದಲ್ಲಿ ನಡೆಯುವ ಧ್ಯಾನಕೂಟಗಳಲ್ಲಿ ಭಾಗವಹಿಸಿ ಅನೇಕ ಆಶೀರ್ವಾದಗಳನ್ನು ಪಡೆದುಕೊಂಡಿದ್ದೇನೆ. ಆ ವಿಶ್ವಾಸದಲ್ಲಿಯೇ ಆ ದಂಪತಿಗಳನ್ನು ರಾತ್ರಿ ಜಾಗರಣೆ ಪ್ರಾರ್ಥನೆಗೆ ನನ್ನೊಟ್ಟಿಗೆ ಕರೆದುಕೊಂಡು ಬಂದು ಮಗುವಿನ ಅನುಗ್ರಹಕ್ಕಾಗಿ ಮೂರು ತಿಂಗಳು ಸತತವಾಗಿ ದಂಪತಿಗಳು ನನ್ನೊಟ್ಟಿಗೆ ಬಂದು ಪ್ರಾರ್ಥಿಸಿದೆವು. 2017 ಡಿಸೆಂಬರ್ ತಿಂಗಳು ಅವರಿಗೆ ಸುಂದರವಾದ ಹೆಣ್ಣುಮಗುವನ್ನು ಕೊಟ್ಟು ಅವರ ದುಃಖವನ್ನು ದೇವರು ಸಂತೋಷವಾಗಿ ಮಾರ್ಪಡಿಸಿದರು. ಯೇಸುವೇ ಸ್ತೋತ್ರ, ಯೇಸುವೇ ವಂದನೆ ಹಲ್ಲೆಲ್ಲೂಯ.

ಇಬ್ರಿಯ 13:6 ''ಸರ್ವೇಶ್ವರ ನನಗೆ ಸಹಾಯಕ, ನಾನು ಭಯಪಡೆನು''

ಕಷ್ಟದಿಂದ ಬಿಡುಗಡೆ

ಆಲ್‌ಫೋನ್ಸ್ ರಾಜು, ಲಾಲ್‌ಬಾಗ್, ಬೆಂಗಳೂರು

ನನ್ನ 8 ವರ್ಷದ ಮಗನಿಗೆ ಕಿವಿ ಕೇಳುತ್ತಿರಲಿಲ್ಲ. ಅನೇಕ ವೈದ್ಯರ ತಪಾಸಣೆ ನಡೆಸಿದಾಗ ಸುಮಾರು 20 ಲಕ್ಷ ರೂಪಾಯಿ ಖರ್ಚು ಮಾಡಿ ಆಪರೇಷನ್ ಮಾಡಬೇಕಾಗುತ್ತದೆ ಎಂದು ವೈದ್ಯರು ತಿಳಿಸಿದಾಗ ನನಗೆ ದಿಗ್ಭ್ರಮೆಯಾಯಿತು. ಸಾಮಾನ್ಯ ಕುಟುಂಬವಾದ ದಿನಗೂಲಿ ಮಾಡುತ್ತಿದ್ದ ನನಗೆ ಅಷ್ಟು ದೊಡ್ಡ ಮೊತ್ತ ಸಂಪಾದನೆ ಅಸಾಧ್ಯವಾಗಿತ್ತು, ಕೊನೆಗೆ ವೈದ್ಯರು 50,000/– ರೂಪಾಯಿಯ ಮೆಷಿನ್ ಹಾಕಿದರೆ ಅವನಿಗೆ ಕಿವಿ ಕೇಳಿಸುತ್ತದೆ ಎಂದು ಆಶ್ವಾಸನೆ ಕೊಟ್ಟರು. ದಿನಗೂಲಿ ಮಾಡುತ್ತಿದ್ದ ನನಗೆ ಆ ಹಣ ಒಟ್ಟು ಮಾಡಲು ಸಾಧ್ಯವಗದೇ ಆರ್‌ಆರ್‌ಸಿ ರಾತ್ರಿ ಜಾಗರಣೆ ಪ್ರಾರ್ಥನೆಯಲ್ಲಿ ನನ್ನ ಮಗನಿಗೆ ಕಿವಿ ಕೇಳುವಂತೆ ಸಹಾಯ ಮಾಡಲು ಕಣ್ಣೀರಿನಿಂದ ಪ್ರಾರ್ಥಿಸಿದೆ. ಡಿಸೆಂಬರ್ ತಿಂಗಳು ರಾತ್ರಿ ಜಾಗರಣೆ ಪ್ರಾರ್ಥನೆಯಲ್ಲಿ ಭಾಗವಹಿಸಿದ ನಂತರ ಅದೇ ವಾರದಲ್ಲಿ ದೇವರು ಅದ್ಭುತಕರವಾಗಿ ಒಬ್ಬ ಸಹೋದರನ ಮುಖಾಂತರ ಉಚಿತವಾಗಿ ನನ್ನ ಮಗನಿಗೆ ಆ ಮೆಷಿನ್ ತಂದುಕೊಟ್ಟರು. ಈಗ ನನ್ನ ಮಗನು ಆ ಮೆಷಿನ್ ಹಾಕಿಕೊಂಡು ಕಿವಿ ಚೆನ್ನಾಗಿ ಕೇಳಿಸುತ್ತದೆ. ಆಪತ್ಕಾಲದಲ್ಲಿ ಸಹಾಯ ಒದಗಿಸಿಕೊಟ್ಟ ಯೆಹೋವಾ ಯೀರೇ ಎಲ್ಲವನ್ನು ಒದಗಿಸುವ ನನ್ನೇಸು ಪ್ರಭುವಿಗೆ ಕೃತಜ್ಞತಾ ಸ್ತುತಿ ಸ್ತೋತ್ರಗಳನ್ನು ಸಲ್ಲಿಸುತ್ತೇನೆ.

1 ಪೇತ್ರ 2:24 ''ಯೇಸುವಿನ ಗಾಯಗಳಿಂದ ನೀವು ಗುಣಹೊಂದಿದಿರಿ''

ಆಪರೇಷನ್ ಇಲ್ಲದೇ ಕಣ್ಣಿನಲ್ಲಿದ್ದ ಗಡ್ಡೆ ಕಣ್ಮರೆಯಾಯಿತು

ಪುಷ್ಪ, ಕೋರಮಂಗಲ

ನನಗೆ ಸುಮಾರು 5 ತಿಂಗಳಿನಿಂದ ನನ್ನ ಕಣ್ಣಿನಲ್ಲಿ ಗಡ್ಡೆಯೊಂದು ಉಂಟಾಗಿ ಬಹಳ ನೋವಿನಿಂದ ನರಳುತ್ತಿದ್ದೆ. ವೈದ್ಯರು ಆಪರೇಶನ್ ಮಾಡಿ ಅದನ್ನು ತೆಗೆಯಬೇಕು ಎಂದಿದ್ದರು. ರಕ್ತ ಮತ್ತು ನೀರು ಕಣ್ಣಿನಿಂದ ಹರಿದು ಬರುತ್ತಿತ್ತು. ಬಹಳವಾದ ನೋವಿನಿಂದ ನರಳುತ್ತಿದ್ದೆ. ಒಂದು ಭಾನುವಾರ ನನ್ನ ದೇವಾಲಯದ ಬಾಗಿಲ ಬಳಿ ಆರ್‌ಆರ್‌ಸಿ ಸೇವೆ ಸಲ್ಲಿಸುವ ಸೇವಕರನ್ನು ಸಂಧಿಸಿ ನನಗಾಗಿ ಪ್ರಾರ್ಥಿಸಿ ಎಂದು ಕೇಳಿಕೊಂಡೆ. ಅವರು ನನಗಾಗಿ ಕಣ್ಣೀರಿನಿಂದ ಪ್ರಾರ್ಥಿಸಿದರು. ನಂತರ ನಾನು ರಾತ್ರಿ ಜಾಗರಣೆ ಪ್ರಾರ್ಥನೆಯಲ್ಲಿ ಭಾಗವಹಿಸಿದೆ. ಎರಡೇ ದಿನದಲ್ಲಿ ನನ್ನ ಕಣ್ಣಿನಿಂದ ರಕ್ತ–ನೀರು ಬರುವುದು ನಿಂತು ಹೋಯಿತು. ಕಾಲ ಕ್ರಮೇಣ ಯಾವುದೇ ಆಪರೇಶನ್ ಇಲ್ಲದೆಯೇ ಆ ಗಡ್ಡೆ ಕಣ್ಮರೆಯಾಯಿತು. ಯೇಸುವಿಗೆ ಸ್ತೋತ್ರ, ಯೇಸುವೇ ಮಹಿಮೆ, ಹಲ್ಲೆಲ್ಲೂಯ.

ಕೀರ್ತನೆ 34:4 ''ಬೇಡಿಕೊಳ್ಳಲು ಕೊಟ್ಟನಾತ ಸದುತ್ತರವನು''

''ಜ್ವರದಿಂದ ಬಿಡುಗಡೆ''

ಬೀನಾ ಫರ್ನಾಂಡಿಸ್, ವೈಟ್‌ಫೀಲ್ಡ್

ನನ್ನ ಮಗುವಿಗೆ ಸುಮಾರು ಮೂರು ದಿನಗಳಿಂದ ವಿಪರೀತ ಜ್ವರ ಸುಸ್ತು, ನೋವಿನಿಂದ ನರಳುತ್ತಿದ್ದಳು. ಯಾವ ಊಟವನ್ನೂ ಮಾಡಲಾಗದೇ ವಾಂತಿಯಾಗುತ್ತಿತ್ತು. ಔಷಧಿ, ಇಂಜೆಕ್ಷನ್ ಕೊಟ್ಟರೂ ಜ್ವರ ವಾಸಿಯಾಗಲಿಲ್ಲ. ಭಯಭ್ರಾಂತಳಾದ ನಾನು ''ಯೇಸುವೇ ನನ್ನ ಮಗಳು ಗುಣವಾದರೆ ನಾನು ರಾತ್ರಿ ಜಾಗರಣೆ ಪ್ರಾರ್ಥನೆಯಲ್ಲಿ ಭಾಗವಹಿಸಿ ಸಾಕ್ಷಿ ನೀಡುತ್ತೇನೆ. ನನ್ನ ಮಗಳನ್ನು ಗುಣಪಡಿಸಿ'' ಎಂದು ಪ್ರಾರ್ಥಿಸಿ ನಿದ್ರೆ ಹೋದೆ. ಮರುದಿನ ಬೆಳಿಗ್ಗೆ ನನ್ನ ಮಗಳು ಪೂರ್ಣ ಸೌಖ್ಯದಿಂದ ಇದ್ದು, ಚೆನ್ನಾಗಿ ಊಟ ಮಾಡಿ ಆಟವಾಡುತ್ತಿದ್ದಳು. ನನ್ನ ಮಗಳನ್ನು ವಿಪರೀತ ಜ್ವರದಿಂದ ಗುಣಪಡಿಸಿದ ಯೇಸುವಿಗೆ ಕೋಟಿ ಕೋಟಿ ಕೃತಜ್ಞತಾ ಸ್ತುತಿ ಸ್ತೋತ್ರಗಳನ್ನು ಸಲ್ಲಿಸುತ್ತೇನೆ.

''ನೀವು ಹೃದಯದಲ್ಲಿ ಕಳವಳಗೊಳ್ಳದಿರಿ; ದೇವರಲ್ಲಿ ವಿಶ್ವಾಸವಿಡಿ; ನನ್ನಲ್ಲಿಯೂ ವಿಶ್ವಾಸವಿಡಿ.'' – ಯೋಹಾನ್ನ 14:1

ಕೀರ್ತನೆ 34:8 ''ನಿರ್ಗತಿಕರು ಮೊರೆಯಿಡಲು ಪ್ರಭು ಕಿವಿಗೊಟ್ಟನು, ಸರ್ವಾಪತ್ತಿನಿಂದವರು ಮುಕ್ತ ಗೊಂಡನು''

ಸಕ್ಕರೆ ರೋಗದಿಂದ ಬಿಡುಗಡೆ

ಇಮ್ಮಾನುವೇಲ್, ಕಾಮಗೆರೆ

ಕೆಲವು ದಿನಗಳಿಂದ ಸುಸ್ತು, ಶರೀರದಲ್ಲಿ ಬಲಹೀನತೆ, ನಿದ್ರಾಹೀನತೆಯಿಂದ ಬಳಲುತ್ತಿದ ನಾನು ವೈದ್ಯರಲ್ಲಿ ತಪಾಸಣೆ ಮಾಡಿದಾಗ ನನಗೆ ಸಕ್ಕರೆ ಖಾಯಿಲೆ ಮತ್ತು ಬಿ.ಪಿ. ಇದೆ ಎಂದು ಗೊತ್ತಾಯಿತು ಮತ್ತು ಸಕ್ಕರೆ ಪ್ರಮಾಣ 483ರಷ್ಟು ಇದ್ದು ನಾನು ಬಹಳ ಬಲಹೀನತೆಯಿಂದ ನರಳುತ್ತಿದ್ದೆ. ಡಿಸೆಂಬರ್ ತಿಂಗಳು ಆರ್‌ಆರ್‌ಸಿ ಧ್ಯಾನಕೇಂದ್ರದ ಕನ್ನಡ ಧ್ಯಾನಕೂಟದಲ್ಲಿ ನನ್ನ ಶಾರೀರಿಕ ಸೌಖ್ಯಕ್ಕಾಗಿ ಕಣ್ಣೀರಿನಿಂದ ಪ್ರಾರ್ಥಿಸಿದೆ. ಸರಿಯಾದ ಊಟ ಮಾಡಲೂ ಸಾಧ್ಯವಾಗದಿದ್ದ ನನಗೆ ಧ್ಯಾನದ ನಂತರ ಚೆನ್ನಾಗಿ ಊಟ ಮಾಡಲು ಸಾಧ್ಯವಾಯಿತು. ವೈದ್ಯರಲ್ಲಿ ಮತ್ತೊಮ್ಮೆ ಪರೀಕ್ಷೆ ಮಾಡಿ ನೋಡಿದಾಗ 483ರಷ್ಟು ಇದ್ದ ಸಕ್ಕರೆ ಪ್ರಮಾಣ ನಾರ್ಮಲ್ ಆಗಿ ಬಂದಿತು. ನನ್ನ ಶರೀರದ ಎಲ್ಲಾ ರೋಗಬಾಧೆಗಳು ಸಂಪೂರ್ಣವಾಗಿ ಸೌಖ್ಯ ಲಭಿಸಿತು. ಆರೋಗ್ಯದಾತ ಯೇಸುಕ್ರಿಸ್ತರಿಗೆ ಸ್ತೋತ್ರಗಳನ್ನು ಸಲ್ಲಿಸುತ್ತೇನೆ.

ಕೀರ್ತನೆ 46:1 ''ದೇವರೆಮಗೆ ಆಶ್ರಯ ದುರ್ಗ ಸಂಕಟದಲಿ ಸಿದ್ಧ ಸಹಾಯಕ''

ಸಾಲ ಬಾಧೆಯಿಂದ ಬಿಡುಗಡೆ

ಮೇರಿ ಶಶಿಕಲಾ, ದೊಡ್ಡ ಸಾಗರಹಳ್ಳಿ

ನಮ್ಮ ಕುಟುಂಬದಲ್ಲಿ ಆರ್ಥಿಕ ಸಮಸ್ಯೆಯಿಂದ ಅನೇಕ ಜನರಲ್ಲಿ ಸಾಲ ಮಾಡಿ ಬಡ್ಡಿ ಕಟ್ಟಲಾಗದೇ ಕಷ್ಟ ಪಡುತ್ತಿದ್ದೆವು. ಸಾಲಗಾರರು ಮನೆ ಬಾಗಿಲಿಗೆ ಬಂದು ಜಗಳವಾಡುತ್ತಿದ್ದಾಗ ನಾವು ಬಹಳ ಅವಮಾನಕ್ಕೊಳಗಾಗಿ ದುಃಖಿತರಾಗಿ ಜೀವನ ನಡೆಸುವುದೇ ಕಷ್ಟಕರವಾಗಿತ್ತು. ಜುಲೈ ತಿಂಗಳು ಆರ್‌ಆರ್‌ಸಿ ಕನ್ನಡ ಧ್ಯಾನಕೂಟದಲ್ಲಿ ಭಾಗವಹಿಸಿ ಈ ಸಾಲದ ಕಷ್ಟದಿಂದ ನಮ್ಮ ಕುಟುಂಬವನ್ನು ಕಾಪಾಡಬೇಕೆಂದು ಕಣ್ಣೀರಿನಿಂದ ಪ್ರಾರ್ಥಿಸಿದೆ. ಅದ್ಭುತಕರವಾದ ರೀತಿಯಲ್ಲಿ ನನ್ನ ಮಗನಿಗೆ ದೇವರು ಒಳ್ಳೆಯ ಕೆಲಸ ದೊರಕಿಸಿಕೊಟ್ಟರು. ಆ ಧ್ಯಾನಕೂಟದ ನಂತರ ಸ್ವಲ್ಪ ಸ್ವಲ್ಪವಾಗಿ ನಮ್ಮ ಸಾಲವನ್ನೆಲ್ಲಾ ತೀರಿಸಿದೆವು. ನಮ್ಮನ್ನು ಆರ್ಥಿಕ ಮುಗ್ಗಟ್ಟಿನಿಂದ ಬಿಡುಗಡೆ ಮಾಡಿ ಆಶೀರ್ವದಿಸಿದ ದೇವರಿಗೆ ಕೃತಜ್ಞತೆಗಳು. ನನ್ನ ಮಗಳಿಗೆ ಅಕ್ಟೋಬರ್ ತಿಂಗಳ ಧ್ಯಾನಕೂಟದಲ್ಲಿ ಪ್ರಾರ್ಥಿಸಿದೆ. ನನ್ನ ಮಗಳು 80% ರಿಸಲ್ಟ್‌ನಲ್ಲಿ ಪಾಸಾಗಿದ್ದು, ಬಿ.ಎಡ್. ಮಾಡಲು ಒಳ್ಳೆ ಕಾಲೇಜಿನಲ್ಲಿ ದೇವರು ಓದುವಂತೆ ಆಶೀರ್ವದಿಸಿದ್ದಾರೆ. ನನ್ನ ಶರೀರದಲ್ಲಿದ್ದ ಕಾಲುನೋವು ಸೊಂಟ ನೋವು ಎಲ್ಲಾ ಬಾಧೆಗಳಿಂದ ಬಿಡುಗಡೆ ನೀಡಿದ್ದಾರೆ. ನನ್ನ ಕುಟುಂಬವನ್ನು ಹೇರಳವಾದ ಅನುಗ್ರಹಗಳಿಂದ ಆಶೀರ್ವದಿಸಿರುವ ರಕ್ಷಕನಾದ ಯೇಸು ಪ್ರಭುವಿಗೆ ಕೋಟಿ ಕೋಟಿ ಕೃತಜ್ಞತಾ ಸ್ತುತಿ ಸ್ತೋತ್ರಗಳನ್ನು ಸಲ್ಲಿಸುತ್ತೇನೆ.

ಕೀರ್ತನೆ 34:18 ''ಸನಿಹದಲ್ಲಿಹನು ಪ್ರಭು ಭಗ್ನ ಹೃದಯಿಗಳಿಗೆ ಉದ್ಧಾರಕನಾತನು ಮನಸ್ಸು ಕುಗ್ಗಿದವರಿಗೆ''

ಜ್ವರದಿಂದ ಬಿಡುಗಡೆ

ಜ್ಯೋತಿ, ಕೆಂಗೇರಿ

ನಾನು ಹಿಂದೂ ಕುಟುಂಬಕ್ಕೆ ಸೇರಿದವಳು. ಆದರೂ ಪ್ರಭು ಯೇಸುಕ್ರಿಸ್ತರನ್ನು ವಿಶ್ವಾಸಿಸುವಳಾಗಿದ್ದೇನೆ. ಕಳೆದ 5 ತಿಂಗಳಿಂದ ನಾನು ಆರ್‌ಆರ್‌ಸಿಯ ರಾತ್ರಿ ಜಾಗರಣೆ ಪ್ರಾರ್ಥನೆಯಲ್ಲಿ ಭಾಗವಹಿಸಿ ದೇವರ ಅನೇಕ ಆಶೀರ್ವಾದಗಳನ್ನು ಪಡೆದುಕೊಂಡಿದ್ದೇನೆ. ನಾನು ಬೆಂಗಳೂರಿನಲ್ಲಿ ಕೆಲಸ ಮಾಡಿ ವಾಸಿಸುತ್ತಿದ್ದೇನೆ. ನನ್ನ 9 ವರ್ಷದ ಮಗ ಊರಿನಲ್ಲಿ ನನ್ನ ತಾಯಿಯೊಟ್ಟಿಗೆ ಜೀವಿಸುತ್ತಿದ್ದಾನೆ. ಕಳೆದ ವಾರ ಆತನಿಗೆ ವಿಪರೀತ ಜ್ವರ ಎಷ್ಟು ಔಷಧಿ ಕೊಟ್ಟರೂ ಜ್ವರ ಕಮ್ಮಿಯಾಗುತ್ತಿಲ್ಲ. ಮಗುವನ್ನು ದೊಡ್ಡ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಬೇಕೆಂದು ನನ್ನ ತಾಯಿ ಹೇಳಿದಾಗ ನನಗೆ ಗಾಬರಿಯಾಯಿತು. ಅದೇ ರಾತ್ರಿ ಕಣ್ಣೀರಿನಿಂದ ದೂರದ ಊರಿನಲ್ಲಿದ್ದ ನನ್ನ ಮಗನ ಸೌಖ್ಯಕ್ಕಾಗಿ ಪ್ರಾರ್ಥಿಸಿದೆ. ಯೇಸು ಪ್ರಭು ನನ್ನ ಮಗನನ್ನು ಗುಣಪಡಿಸಿದರೆ ರಾತ್ರಿ ಜಾಗರಣೆ ಪ್ರಾರ್ಥನೆಯಲ್ಲಿ ಸಾಕ್ಷಿ ಹೇಳುತ್ತೇನೆಂದು, ಮಾರನೇ ದಿನ ಫೋನ್ ಮಾಡಿದಾಗ ನನ್ನ ತಾಯಿ ಹೇಳಿದರು. ಈಗ ಮಗು ಚೆನ್ನಾಗಿದೆ. ಜ್ವರ ಇಲ್ಲ, ಶಾಲೆಗೆ ಹೋಗಿದ್ದಾನೆ ಎಂದು. ಹೆತ್ತ ತಾಯಿ ಮರೆತರೂ ನಾನು ನಿನ್ನ ಮರೆಯಲಾರೆ ಎಂದು ಪ್ರಭು ಯೇಸು ನನ್ನ ಮಗನಿಗೆ ಪೂರ್ಣ ಸೌಖ್ಯ ನೀಡಿದ್ದಾರೆ. ಯೇಸುವಿಗೆ ಮಹಿಮೆ ಅಲ್ಲೆಲ್ಲೂಯ

ಕೀರ್ತನೆ 107:20 ''ಗುಣ ಪಡಿಸಿದನರವನು ತನ್ನ ವಾಣಿಯಿಂದ''

ರಕ್ತಸ್ರಾವ ರೋಗ ಸೌಖ್ಯವಾಯಿತು.

ಮೇರಿ, ದೊರೆಸಾನಿ ಪಾಳ್ಯ, ಬೆಂಗಳೂರು.

ನನಗೆ ಸುಮಾರು ಹದಿನೈದು ದಿನಗಳಿಂದ ಸತತವಾಗಿ ರಕ್ತಸ್ರಾವ ಆಗುತ್ತಿತ್ತು. ಶರೀರದಲ್ಲಿ ಸುಸ್ತು, ಬಲಹೀನತೆ, ವಿಪರೀತ ಸೊಂಟ ನೋವು ಮತ್ತು ಕಾಲು ನೋವಿನಿಂದ ನರಳುತ್ತಿದ್ದೆ. ಈ ಸಮಯದಲ್ಲಿ ರಿನ್ಯೂವಲ್ ವಾಯ್ಸ್ ಪತ್ರಿಕೆಯ ಸಾಕ್ಷಿಗಳನ್ನು ಓದಿ ವಿಶ್ವಾಸದಿಂದ ಆ ಪತ್ರಿಕೆಯಲ್ಲಿದ್ದ ಫೋನ್ ನಂಬರಿಗೆ ಕರೆ ಮಾಡಿ ನನಗಾಗಿ ಪ್ರಾರ್ಥಿಸಲು ಕೇಳಿಕೊಂಡೆ. ದೇವಸೇವಕರೊಬ್ಬರು ಫೋನ್‌ನಲ್ಲಿ ಕಣ್ಣೀರಿನಿಂದ ನನಗಾಗಿ ಪ್ರಾರ್ಥಿಸಿದರು. ಆ ಪ್ರಾರ್ಥನೆ ನಂತರ ಅದ್ಭುತಕರವಾಗಿ ಧಾರಾಕಾರವಾಗಿ ಹರಿಯುತ್ತಿದ್ದ ರಕ್ತ ಸ್ರಾವ ತತ್‌ಕ್ಷಣವೇ ನಿಂತು ಹೋಯಿತು. ನನ್ನ ಶರೀರದ ಎಲ್ಲಾ ಬಾಧೆಗಳು ಬಿಡುಗಡೆಯಾದವು. ಪ್ರಾರ್ಥನೆ ಮೂಲಕ ನನ್ನನ್ನು ಗುಣ ಪಡಿಸಿದ ಯೇಸುವಿಗೆ ಕೃತಜ್ಞತಾ ಸ್ತುತಿ ಸ್ತೋತ್ರಗಳನ್ನು ಸಲ್ಲಿಸುತ್ತೇನೆ.

ರಿನ್ಯೂವಲ್ ವಾಯ್ಸ್ ಮಾಸ ಪತ್ರಿಕೆ

ಯ ತಂಡವು ಪ್ರತಿ ಗುರುವಾರ ಈ ಮಾಸ ಪತ್ರಿಕೆಗಾಗಿ ದುಡಿಯುತ್ತಿರುವ ಎಲ್ಲಾ ವಿತರಕರು, ಸ್ವಯಂ ಸೇವಕರು, ಹಿತೈಷಿಗಳು ಮತ್ತು ಅವರ ಕುಟುಂಬಗಳಿಗಾಗಿ ವಿಶೇಷವಾಗಿ ಪ್ರಾರ್ಥಿಸುತ್ತಾರೆ. ಪ್ರತಿ ಮಂಗಳವಾರ ಈ ಎಲ್ಲಾ ಸದಸ್ಯರ ಉದ್ದೇಶಗಳಿಗಾಗಿ ದಿವ್ಯ ಬಲಿಪೂಜೆಯನ್ನು ಅರ್ಪಿಸುತ್ತೇವೆ. ಈ ಮಾಸ ಪತ್ರಿಕೆಯ ಎಲ್ಲಾ ವಿತರಕರಿಗೂ ನಾನಾ ವಿಧದಲ್ಲಿ ಈ ಪತ್ರಿಕೆಗಾಗಿ ಸೇವೆ ಸಲ್ಲಿಸುತ್ತಿರುವ ಪ್ರತಿಯೊಬ್ಬರಿಗಾಗಿ ನಾವು ಪ್ರಾರ್ಥಿಸುತ್ತೇವೆ. ಪೋಸ್ಟ್, ಇ–ಮೇಲ್, ದೂರವಾಣಿ ಅಥವಾ ನಮ್ಮ ವೆಬ್‌ಸೈಟ್ ಮೂಲಕ ಮತ್ತು ನೇರವಾಗಿ ರಿನ್ಯೂವಲ್ ವಾಯ್ಸ್ ತಂಡದ ಸದಸ್ಯರನ್ನು ಸಂಪರ್ಕಿಸಿ ನೀವು ನಿಮ್ಮ ಪ್ರಾರ್ಥನಾ ಕೋರಿಕೆಗಳನ್ನು ನಮಗೆ ನೀಡಬಹುದು. ರಿನ್ಯೂವಲ್ ವಾಯ್ಸ್ ತಂಡದವರು ಪರಮ ಪ್ರಸಾದದ ಸನ್ನಿಧಿಯಲ್ಲಿ ನಿಮ್ಮ ಪ್ರಾರ್ಥನಾ ಕೋರಿಕೆಗಳನ್ನು ಸಲ್ಲಿಸಿ ನಿಮಗಾಗಿ ವಿಶೇಷವಾಗಿ ಪ್ರಾರ್ಥಿಸುವರು.